3. ತಾನು ಹರಾಜಿನಲ್ಲಿ ಪಡೆದಿರುವ ಜವುಬ್ದಿನಾ ಕ್ರಿಮ್ಮತ್ತಿ ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಜವುಬ್ದಿನಾವನ್ನು ಸಾಗಿಸುವದಕ್ಕೆ ರಸದಾ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಶೇಕಡ ಬಂದಕ್ಕೆ 12 ರೂಪಾಯನ ಮೇರೆ ಡಿಪೋ ಭಾಡಿಗೆ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್

ತಾರೀಖು 17ನೆ ನವೆಂಬರ್ 1907.

ಸ್ಯ1908ನೆ ಇಸವಿ ಜನವರಿ ಮಾಹೆ 16ನೆ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರಿಗೂ, ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡೆಯುವ ಶ್ರೀ ರಾಮದೇವರ ರಥೋತ್ಸವ ಕಾಲದಲ್ಲಿ ಗವರ್ನಮೆಂಟಿನಿಂದ ತಲಪಿರುವ 2—11—06ನೆ ಮತ್ತು ಕ್ರಂ 5436-8—L. B. (254-05)—6ನೆ ನಂಬರಿನ ಪ್ರೊಸಿಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತೆ.

2. ಕಾವೇರಿ ನದಿಯ ಬಲಭಾಗದಲ್ಲಿರುವ ಮುಸಾಫರ ಬಂಗ್ಲೆ ಬಳಿ ಇರುವ ಮೈದಾನದಲ್ಲಿ ಪ್ರದರ್ಶನಶಾಲೆಗೆ ಏರ್ಪಡಿಸುತ್ತೆ.

3. ಈ ಕೆಳಗೆ ಕಂಡಂತೆ ಬಹುಮಾನಗಳು ಕೊಡಲ್ಪಡುತ್ತವೆ.

	ಮೊದಲನೆ ಬಹುಮಾನ.	ಎರಡನೆ ಬಹುಮಾನ.	ಮೂರನೆ ಬಹುಮಾನ.	ನಾಲ್ಕನೆ ಬಹುಮಾನ.	ಬಹುಮಾನಗಳ ಸಂಖ್ಯೆ	ಜುಮ್ಲಾ ಮೊಬಲಗು
	ರೂ.	ರೂ.	ರೂ.	ರೂ.	ರೂ.	ರೂ.
ಅತ್ಯಂತ ಉತ್ತಮವಾದ ಎತ್ತುಗಳ ಜೊತೆ ..	35	25	20	...	3	80
ಡಿಟೋ (ಬೆಟ್ಟದಪುರ) ..	10	...	...	...	1	10
ಬೀಜದ ಹೋರಿ	30	15	... ...	...	2	45
ಡಿಟೋ (ನಾಡು ಅಥವಾ ಕಂಟ್ರಿ) ..	10	..	...	..	1	10
ಗಂಡು ಕರು	20	10	5 ರೂಪಾಯಿನಂತೆ ಮೂರು ಬಹುಮಾನ.	..	5	45
ಬೆಟ್ಟದಪುರದ ಎತ್ತು	10	...	...	..	1	10

4. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರುಗಳನ್ನು ಜುನಾಯಿಸಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನ ಮುಗಿದ ಕೂಡ್ಲೆ ಇನಾಂಗಳನ್ನು ಹಂಚುತ್ತೆ.

5. ಮೇಲ್ಕಂಡಂತೆ ದ್ರವ್ಯರೂಪದ ಇನಾಂ ಅಲ್ಲದೆ, ಒಂದು ಯೋಗ್ಯತಾಪತ್ರವು ಸಹ ದೊರೆಯುತ್ತೆ.

6. 'ಇನಾಂ ಪಡೆಯಲು ಲಾಯಖಾದ ಜಾನುವಾರು ಪ್ರದರ್ಶನಶಾಲೆಯಲ್ಲಿ ಇಲ್ಲದಿದ್ದರೆ, ಸದರಿ ಇನಾಂ ಅನಾವತ್ತಿನಲ್ಲಿ ಇಡುವದಕ್ಕಾಗಲಿ ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರುಗಳಿಗೆ ಕೊಡುವದಕ್ಕಾಗಲಿ, ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಪ್ರದರ್ಶನಶಾಲೆಗೆ ಬಂದು ದಿವಸ ಮುಂಚಿತವಾಗಿ ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು, ಎಡತೊರೆ ತಾಲ್ಲೂಕು ಅಮಲ್ದಾರ್ರವರಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನವುಕರರಿಗೆ ಆಗಲಿ, ಪ್ರದರ್ಶನ ಮುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿಯಿಲ್ಲದೆ ಅವಕಾಶವಿರುವಂತೆ, ಬರೆದು ತಮ್ಮ ಹೆಸರು, ಜಾನುವಾರು ತಪಶೀಲು ದಾಖಲ್ಮಾಡಿಸಿಕೊಳ್ಳಬೇಕು.

8. 'ಪ್ರದರ್ಶನಶಾಲೆಯಲ್ಲಿ ಸೇರುವ ಜಾನುವಾರುಗಳಿಗಾಗಲಿ, ಅಥವಾ ಅವುಗಳಿಂದ ಜನಗಳಿಗೇ ಆಗಲಿ ಯಾವ ಅಪಾಯವು ಸಂಭವಿಸದಂತೆ ಅವುಗಳ ಸ್ವಂತಗಾರರು ನೋಡಿಕೊಳ್ಳಬೇಕು.

9. ಸ್ಥಳವಲ್ಲಿ ಜವಾಯಿಸಬಹುದಾದ ಜಾನುವಾರುಗಳಿಗೆ ರಾತೀಪು ಸಾಲ್ಪೆ ಹೋಗಬಹುದಾದ್ದರಿಂದ ಪ್ರದರ್ಶನವಲ್ಲಿ ಸೇರಬಹುದಾದ ಜಾನುವಾರುಗಳಿಗೆ ರಾತೀಪಿನ ಏರ್ಪಾಡನ್ನು ಅವುಗಳ ಸ್ವಂತಗಾರರೇ ನೋಡಿಕೊಳ್ಳುವದು ಒಳ್ಳೇದು.

10. ಚುಂಚನಕಟ್ಟೆ ರಥೋತ್ಸವಕ್ಕೆ ಬಹಳ ದೊಡ್ಡಮಟ್ಟಾದ ಪರಸೆ ಸೇರುವದ್ದರಿಂದ ದನಗಳ ವ್ಯಾಪಾರ ಬಹಳ ಚನ್ನಾಗಿ ನಡೆಯುತ್ತೆ.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.